SANCTION OF BUILDING GRANTS IN TIPTUR TALUK.

*Q.—597. Sri K. P. REVANNASIDDAPPA (Tiptur).—

Will the Government be pleased to state :—

(*a*) the number of applications received praying for building grants in Tiptur taluk in the year 1960-61 ;

(*b*) the number of houses for which grants were allotted and amount of grant in 1960-61 ;

(*c*) whether they were aware that though houses are constructed, grants are not given since five to six years ;

(*d*) whether in view of the number of applicants praying for grant have already constructed houses, do they intend giving special grant so as to complete them ?

*A.—Sri N. RACHAIAH (Minister for Agriculture and Social Welfare).—

(*a*) 477.

(*b*) 23 fresh houses were taken up for construction during 1960-61. Grants allotted amounted to Rs. 13,250. Out of this, a sum aggregating Rs. 8,276 were paid in respect of 23 houses taken up during 1960-61. The rest of the amount was paid in respect of old incomplete houses.

(*c*) No.

(*d*) No.

ಶ್ರೀ ಕೆ. ಪಿ. ರೇವಣಸಿದ್ದಪ್ಪ.— 477 ಜನರಿಗೆ ಗ್ರಾಂಟ್ ಕೊಡದೆ ಇರುವುದಕ್ಕೆ ಕಾರಣ ಏನು?

†ಶ್ರೀ ಎಚ್. ರಾಚಯ್ಯ.— ಯಾರು ಯಾರು ಮನೆಗಳಿಗಾಗಿ ಗೋಡೆಗಳನ್ನು ಹಾಕಿಕೊಂಡು ಮನೆಗಳು ಸಂಪೂರ್ಣವಾಗಿರಲಿಲ್ಲವೋ ಅಂಥವರಿಗೆ ಮಾತ್ರ ಕೊಟ್ಟಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.— ತಾವು ಪ್ರವಾಸ ಬಂದ ಕಾಲದಲ್ಲಿ ಗೋಡೆಗಳನ್ನು ಹಾಕಿದ್ದಾರೆಯೇ ಇಲ್ಲವೇ ನೋಡಿದ್ದೀರಾ,? ಅಥವಾ ಅಂಕಿಅಂಶಗಳ ಮೇಲೆ ಹೇಳುತ್ತೀರಾ?

ಶ್ರೀ ಎನ್. ರಾಚಯ್ಯ.— ಡೆಪ್ಯುಟಿ ಕಮಿಷನರಿಂದ ವರದಿಯನ್ನು ತರಿಸಿಕೊಂಡು ಅದರ ಆಧಾರದ ಮೇಲೆ ಹೇಳುತ್ತಿದ್ದೇನೆ.

ಶ್ರೀ ಕೆ. ಸಿ. ರೆಡ್ಡಿ.— ತಾವು ಸಂಚಾರ ಬಂದಾಗ ಆ ಭಾಗದಲ್ಲಿ ನೋಡಿದರೆ ಎಷ್ಟೋ ಜನ ಗೋಡೆ ಹಾಕಿಕೊಂಡು ಸರ್ಕಾರದ ಸಹಾಯವನ್ನು ಎದುರು ನೋಡುತ್ತಿರುವುದು ಗೊತ್ತಾಗುತ್ತದೆ. ಆದ್ದರಿಂದ ಡೆಪ್ಯುಟಿ ಕಮಿಷನರ ವರದಿಯು ಸರಿಯಾಗಿರುವುದಾಗಿದ್ದರೆ ಅವರ ಮೇಲೆ ಏನು ಕ್ರಮ ತಗೆದುಕೊಳ್ಳುತ್ತೀರಿ?

ಶ್ರೀ ಎಚ್. ರಾಚಯ್ಯ.— ಇದು ಸಾಮಾನ್ಯವಾಗಿ hypothetical question ಆಗುತ್ತದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.— ಈಗಿನ ಆರ್ಡರ್ ಜಾರಿಗೆ ಬರುವುದಕ್ಕೆ ಮುಂಚಿತವಾಗಿ ಅನೇಕ ಜನ ನಿಮ್ಮ ಮಾತನ್ನು ನಂಬಿಕೊಂಡು ಮನೆಗಳನ್ನು ಕಟ್ಟಲು ಮೂರು ನಾಲ್ಕು ಸಲ ಗೋಡೆಗಳನ್ನು ಹಾಕಿಸ್ಕೊಂಡರೂ ಸಹ ಅವರಿಗೆ ಗ್ರಾಂಟ್ ಕೊಡದೆ ಇದ್ದುದರಿಂದ ಅವರಿಗೆ ಬಹಳ ಕಷ್ಟ ವಾಗಿದೆ. ಆದುದರಿಂದ ಈಗಿನ ಆರ್ಡರ್‌ಗೆ ಮೊದಲು ಗೋಡೆಗಳನ್ನು ಹಾಕಿದ್ದವರಿಗೆ ಹಣ ಸಹಾಯ ಮಾಡುವುದು ನ್ಯಾಯವೋ ಅಲ್ಲವೋ?

ಶ್ರೀ ಎಚ್. ರಾಚಯ್ಯ.— ಕೊಡತಕ್ಕದ್ದು ನ್ಯಾಯ; ಅದೇ ರೀತಿಯಾಗಿ ಕೊಟ್ಟಿದ್ದೇವೆ. 24-12-59 ಮತ್ತು 2-3-60 ರಲ್ಲಿ ಎಲ್ಲ ಜಿಲ್ಲಾಧಿಕಾರಿಗಳಿಗೂ ಬರೆದು ಪ್ರತಿಯೊಂದು ಕಡೆಯೂ ಎಷ್ಟೆಷ್ಟು ಮನೆಗಳು ಅಪೂರ್ಣವಾಗಿವೆ ಎಂದು ತರಿಸಿಕೊಂಡು ಅದರ ಮೇಲೆ ನಾವು 18 ಲಕ್ಷ ರೂಪಾಯಿಗಳನ್ನು ಅಪೂರ್ಣ ಮನೆಗಳಿಗಾಗಿ ಮಂಜೂರು ಮಾಡಿಕೊಟ್ಟಿದ್ದೇವೆ. ಆ ಪ್ರಕಾರ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಂಡು ಸಂಪೂರ್ಣವಾಗದೆ ಇರುವ ಮನೆಗಳಿಗೆ ಕೊಟ್ಟಿದ್ದಾರೆ. ಈಗ ಯಾರಾದರೂ ಮನೆಗಳನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಅಂಥವರಿಗೆ ಸರ್ಕಾರದ ತೀರ್ಮಾನದ ಪ್ರಕಾರ 1,500 ರಿಂದ 3,000 ರೂ ವರೆಗೆ ಸಾಲ ಕೊಡುವುದಕ್ಕೆ ಸಾಧ್ಯವಿದೆ. ಇಂಥಿಂಥ ಕಡೆ ಮನೆಗಳು ಸಂಪೂರ್ಣವಾಗಿಲ್ಲವೆಂದು ಬರೆದರೆ, ನಾವು ವರದಿಯನ್ನು ತರಿಸಿ ಕೊಂಡು ಹೊಸ ಯೋಜನೆಯ ಪ್ರಕಾರ ಹಣ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.— ನಾನು ಹೊಸ ಯೋಜನೆಯ ವಿಷಯ ಕೇಳಲಿಲ್ಲ. ಹಿಂದೆ ಗೋಡೆ ಹಾಕಿ ತೊಂದರೆ ಪಟ್ಟಿರುವ ಜನಗಳಿಗೆ, ಈಗಿನ ಆಜ್ಞೆ ಬರುವುದಕ್ಕೆ ಮುಂಚೆ ಯಾರು ಮನೆಗಳನ್ನು ಕಟ್ಟಿದ್ದರೋ, ಆ ಬಗ್ಗೆ ವರದಿಯನ್ನು ತರಿಸಿಕೊಂಡು ಹಿಂದಿನ ಯೋಜನೆ ಪ್ರಕಾರ ಗ್ರಾಂಟ್ ಕೊಡುವುದಕ್ಕೆ ಸಾಧ್ಯವಿಲ್ಲವೆ? ಮತ್ತು ನಮ್ಮ ತಾಲ್ಲೂಕಿಗೆ ಕೊಟ್ಟಿದ್ದ 50 ಸಾವಿರ ರೂಪಾಯಿಗಳನ್ನು withdraw ಮಾಡಿ ಬೇರೆ ತಾಲ್ಲೂಕುಗಳಿಗೆ ಕೊಟ್ಟಿದ್ದೀರಿ ಅಲ್ಲವೆ?

ಶ್ರೀ ಎಚ್. ರಾಚಯ್ಯ.— ನಾನು ಪ್ರವಾಸ ಮಾಡಿದಾಗ, ತಿಪಟೂರು ತಾಲ್ಲೂಕಿನಲ್ಲಿ ಸಂಪೂರ್ಣವಾಗದೆ ಯಿರುವ ಮನೆಗಳಿಗೆ ಕೊಟ್ಟ ಮೇಲೂ ಇನ್ನೂ ಹಣ ಉಳಿಯುವುದರಿಂದ ಅದೇ ತಾಲ್ಲೂಕಿನಲ್ಲಿ ಹೊಸ ಮನೆಗಳಿಗೆ ಕೊಡುವ ಹಾಗೆ ಮಾಡಿ ಎಂದು ಮಾನ್ಯ ಸದಸ್ಯರು ಹೇಳಿದ್ದು ಜ್ಞಾಪಕವಿದೆ. ಎಲ್ಲೆಲ್ಲಿ ಮನೆಗಳು ಅಪೂರ್ಣವಾಗಿವೆಯೋ ಅಲ್ಲಿ ಮಾತ್ರ ಹಣವನ್ನು ಕೊಡಲಾಗಿದೆ. ಮತ್ತು ಉಳಿದ ಹಣವನ್ನು ಬೇರೆ ತಾಲ್ಲೂಕುಗಳಲ್ಲಿ ಅಪೂರ್ಣವಾಗಿರುವ ಮನೆ ಗಳಿಗೆ ಕೊಡಿ ಎಂದು ನಮೂನಿಸಿ ಕಳಿಸಿದ್ದೆವು. ಆ ತಾಲ್ಲೂಕಿಗೆ ಹಿಂದೆ ಕೊಟ್ಟಿರತಕ್ಕ ಹಣವಿದ್ದು, ಅಲ್ಲಿ ಅಪೂರ್ಣವಾಗಿರುವ ಮನೆಗಳಿದ್ದ ಪಕ್ಷದಲ್ಲಿ ಆ ಹಣವನ್ನು ಕೊಡಬಹುದು. ಹೊಸದಾಗಿ ಕೊಡುವುದಕ್ಕೆ ಆಗುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— 477 ಮನೆಗಳಿಗೆ ಹಣವನ್ನು ಕೊಟ್ಟು ಉಳಿದುದನ್ನು ಬೇರೆ ಕೊಡಿ ಎಂದು ಹೇಳಿದ್ದರೇ ಹೇಗೆ?

ಶ್ರೀ ಎಚ್. ರಾಚಯ್ಯ.— 477 ಮನೆಗಳಿಗೂ ಕೊಡಿ ಎಂದು ಹೇಳಿದ್ದರು. ಅಪೂರ್ಣ ವಾಗಿರುವ ಮನೆಗಳಿಗೆ ಮೊದಲು ಕೊಟ್ಟು ಅಮೇಲೆ ಹೊಸದಾಗಿ ಕಟ್ಟುವ ಮನೆಗಳಿಗೂ ಕೊಡಿ ಎಂದು ಹೇಳಿದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— 477 ಸಂದರ್ಭಗಳಲ್ಲಿ ತಾವು ನಿರೀಕ್ಷಣೆ ಮಾಡಿದಷ್ಟು ಮಟ್ಟಕ್ಕೆ ಗೋಡೆಗಳು ಎದ್ದಿರಲಿಲ್ಲವೇ, ಅಥವಾ ಗೋಡೆಗಳನ್ನು ಹಾಕಿರಲಿಲ್ಲವೇ?

ಶ್ರೀ ಎಚ್. ರಾಚಯ್ಯ.—Incomplete houses ಎಂದರೆ, ಪೂರ್ಣವಾಗಿ ಗೋಡೆ ಗಳನ್ನು ಹಾಕಿರಬೇಕು. ಅಂಥವರಿಗೆ ಮಾತ್ರ ಹಣ ಸಹಾಯ ಕೊಡಬಹುದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— Incomplete ಎಂದರೆ ಬಹಳ ದೂರ ಹೋಗುತ್ತದೆ. ಗೋಡೆಗಳು roofing levelಗೆ ಬಂದಿರಬೇಕೇ, ಪಾಯ ಹಾಕಿರಬೇಕೇ, ಎಷ್ಟು ಎತ್ತರ ಗೋಡೆ ಕಟ್ಟಿದರೆ, ಸರ್ಕಾರದ ಸಹಾ ದೊರೆಯುತ್ತದೆ?

ಶ್ರೀ ಎಚ್. ರಾಚಯ್ಯ.— Roofing levelಗೆ ಬರಬೇಕು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ಈ 477 ಸಂದರ್ಭಗಳಲ್ಲಿ roofig levelಗೆ ಒಂದೂ ಬಂದಿಲ್ಲವೆಂದು ಡೆಪ್ಯುಟಿ ಕಮಿಷನರಾಗಲೀ, ವಿಶೇಷ ಅಧಿಕಾರಿಗಳಾಗಲೀ, ರಿಪೋರ್ಟ್ ಮಾಡಿದ್ದಾರೆಯೆ ?

ಶ್ರೀ ಎಚ್. ರಾಚಯ್ಯ.— 64 ನಂದರ್ಭಗಳಲ್ಲಿ ಗೋಡೆಗಳು ಧಾವಣಿಮಟ್ಟಕ್ಕೆ ಎದ್ದಿವೆಯೆಂದು ವರದಿ ಬಂದಿದೆ.

ಶ್ರೀ ಜಿ. ಎಚ್. ಪುಟ್ಟಣ್ಣ.—1960-61 ನೆಯ ಸಾಲಿನಲ್ಲಿ ಪೂರ್ತಿಯಾಗದೆ ಇರುವ ಮನೆಗಳಿಗೆ ಹಣವನ್ನು ಕೊಟ್ಟು ಉಳಿದಹಣವನ್ನು 23 ಮನೆಗಳಿಗೆ ಕೊಟ್ಟಿದ್ದೀರಿ ಎಂದು ಉತ್ತರದಲ್ಲಿದೆ. ಡೆಪ್ಯುಟಿ ಕಮಿಷನರಿಂದ ಇನ್‌ವೆಸ್ಟಿಗೇಟ್ ಮಾಡಿಸಿ, ರಿಪೋರ್ಟ್ ತರಿಸಿಕೊಂಡು ಇನ್ನೂ ಪೂರ್ತಿಯಾಗದೆ ಇರುವ roofing level ಗೆ ಗೋಡೆಗಳು ಬಂದಿರುವ ಯಾವುದಾದರೂ ಮನೆಗಳಿದ್ದರೆ ಅವುಗಳಿಗೂ ಕೊಡುತ್ತೀರಾ?

ಶ್ರೀ ಎಚ್. ರಾಚಯ್ಯ.— ಇನ್‌ವೆಸ್ಟಿಗೇಟ್‌ಮಾಡಿ ಹೊಸಯೋಜನೆಯ ಪ್ರಕಾರ ಸಾಲ ಕೊಡತಕ್ಕ ವ್ಯವಸ್ಥೆಮಾಡುತ್ತೇವೆ.

ಶ್ರೀ ಜಿ. ಎಚ್. ಪುಟ್ಟಣ್ಣ.— ಹೊಸ ಯೋಜನೆಯ ಪ್ರಕಾರ ಸೊಸೈಟಿಯ ಮೆಂಬರಾಗಿ ಸಾಲವನ್ನು ಪಡೆಯಬೇಕು. ಸೊಸೈಟಿಯ ಮೆಂಬರಾಗದೆ ಇರುವವರಿಗೆ ಇವತ್ತಿನವರೆಗೂ ಕೊಟ್ಟಿಲ್ಲ. ಇದಕ್ಕೆ ಏನು ಪರಿಹಾರ ಮಾಡುತ್ತೀರಿ?

ಶ್ರೀ ಎಚ್. ರಾಚಯ್ಯ.—ಸೊಸೈಟಿಗಳ ಮೂಲಕವಲ್ಲ. ತಾಲ್ಲೂಕು ಬೋರ್ಡ್‌ಗಳ ಮೂಲಕ ಎಲ್ಲರಿಗೂ ಕೊಡಬೇಕು ಎಂದು ಆಜ್ಞೆ ಹೋಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.— ಗಾ್ರಂಟ್ ಕೊಡುವಾಗ incomplete ಎನ್ನುವುದಕ್ಕೆ ಏನು interpret ಮಾಡಿದರು ಎಂದರೆ, ಯಾರಿಗೆ ಐದು-ಹತ್ತು ರೂಪಾಯಿ ಕೊಟ್ಟಿದ್ದಾರೋ, ಅಂಥವರ ವಿಚಾರದಲ್ಲಿ incomplete ಎಂದು ಮಾಡಿದರೇ ವಿನಾ ಗೋಡೆಗಳನ್ನು ಪೂರ್ತಿ ಕಟ್ಟಿದ್ದ ಮನೆಗಳಿಗೆ in complete ಎಂದು ಹೇಳಲಿಲ್ಲ. ಈ ದೃಷ್ಟಿಯಿಂದ ಜನಗಳಿಗೆ ಬಹಳ ತೊಂದರೆಯಾಗಿದೆ. ಈಗಾಗಲೇ ಗೋಡೆಗಳು ಪೂರ್ತಿಯಾಗಿ ಎದ್ದಿರುವ ಮನೆಗಳಿಗೆ ಹಿಂದಿನ ರೂಲ್ಸ್ ಪ್ರಕಾರ ಗಾ್ರಂಟ್‌ಕೊಟ್ಟು ಅವರನ್ನು ಉಳಿಸುವುದಕ್ಕೆ ಪ್ರಯತ್ನಪಡುತ್ತೀರಾ?

ಶ್ರೀ ಎಚ್. ರಾಚಯ್ಯ.— ಹೊಸ ಯೋಜನೆ ಪ್ರಕಾರ ಸಾಲ ಕೊಡುವುದಕ್ಕೆ ಯೋಚನೆ ಮಾಡುತ್ತೇವೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.— ಹಳೆಯದು?

ಶ್ರೀ ಎಚ್. ರಾಚಯ್ಯ.— ಹಳೆಯ ಪ್ರಶ್ನೆಯೇ ಇಲ್ಲ.

ಶ್ರೀ ಮಂಜಪ್ಪ ಉಳ್ಳಾಳ್.— ಹರಿಜನರಿಗೆ ಕೊಡುತ್ತಿದ್ದ 400 ರೂಪಾಯಿ ಸ್ಕಾಪ್ ಮಾಡುವುದಕ್ಕೆ ಕಾರಣವೇನು?

ಶ್ರೀ ಎಚ್. ರಾಚಯ್ಯ.— ಮಾನ್ಯ ಸದಸ್ಯರೂ ಸ್ಟೇಟ್ ಅಡ್ವೈಸರಿ ಬೋರ್ಡ್ ಸದಸ್ಯರಾಗಿದ್ದಾರೆ. ಈ ಬೋರ್ಡಿನ ಒಂದು ನಿರ್ಣಯದ ಪ್ರಕಾರ, ಕ್ಯಾಬಿನೇಟ್ ತೀರ್ಮಾನದ ಪ್ರಕಾರ, ಮತ್ತು ದೇಶದ ಅನೇಕ ಲೆಜಿಸ್ಲೇಟರುಗಳು ಮತ್ತು ಮುಖಂಡರುಗಳ ಪ್ರಕಾರ ಈ ಒಂದು ಯೋಜನೆಯಿಂದ ಹರಿಜನರಿಗೆ ಅನುಕೂಲವಾಗುತ್ತಿದ್ದೆಯೆಂದು ಯಾರೂ ಒಪ್ಪುವುದಿಲ್ಲ. ಇದು ಡಿಸ್ಟ್ರಕ್ಟೀವ್ ಸ್ಕೀಮ್ ಎಂದು ಕಂಡುಬಂದು, ರಚನಾತ್ಮಕ ಕೆಲಸಗಳಿಂದ, ಎಂದರೆ ಹರಿಜನರಿಗೆ ವಿದ್ಯಾಭ್ಯಾಸಕ್ಕೆ, ಅಗ್ರಿಕಲ್ಚರ್ ಕಾರ್ಪೋರೇಷನ್‌ಗೆ, ಕೈಗಾರಿಕೆಗೆ ಅನುಕೂಲ ಮಾಡಿಕೊಡುವುದರಿಂದ, ಅವರ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ. ನಿರುದ್ಯೋಗ ಹೋಗುತ್ತದೆಂದೂ, ಅಲ್ಪಸ್ವಲ್ಪ ಒದಗಿಸಿದತಕ್ಕಂಥ ಹಣದಿಂದ ಅವಾರ ಸಂಖ್ಯೆಯಲ್ಲಿರುವ ಅವರಿಗೆ ಅನುಕೂಲವಾಗುವುದಿಲ್ಲವೆಂದು, 3ನೆಯ ಯೋಜನೆಯಲ್ಲಿ ಹೆಚ್ಚು ಹಣವನ್ನು ಒದಗಿಸಿ, ಅವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿ ವಿಚಾರಗಳಲ್ಲಿ ಯೋಜನೆಗಳನ್ನು ಈಗಾಗಲೇ ಜಾರಿಗೆ ಕೊಟ್ಟಿದ್ದೇವೆ.

GRANTING OF CERTAIN FOREST PRIVILEGES AND CONCESSIONS TO THE AGRICULTURISTS OF NORTH KANARA DISTRICT.

* Q.—636. Sri RAMAKRISHNA HEGDE (Sirsi).—

Will the Government be pleased to state:—

(*a*) whether the Government Order passed in June 1958 granting certain Forest privileges and concessions to the agriculturists of North Kanara District has been implemented;

(*b*) if not, the reasons therefor ?

A.—Sri B. VAIKUNTA BALIGA (Minister For Law and Labour) on behalf of Sri H. S. RUDRAPPA (Minister for Forests).—

(*a*) The Forest privileges and concessions sanctioned in the Government Order No. AFD 6 MRP 58, dated 19th May 1958 have been implemented. The other matters are also being implemented.

(*b*) Does not arise in view of reply to clause (*a*).

Sri RAMAKRISHNA HEGDE.—Sir, may I know the aspects of the Government order passed in June 1958 ?

† Sri B. VAIKUNTA BALIGA.—Sir, there are 9 items and most of them have been implemented fully or partially and those that are not implemented are granting slopes for cashew cultivation on betta lands.

Sri RAMAKRISHNA HEGDE.—May I know whether the betta lands have been divided as mentioned in the G. O. ?

Sri B. VAIKUNTA BALIGA.—Not yet fully.

Sri RAMAKRISHNA HEGDE.—May I know whether the aspect relating to adequate grant of timber to benefit the agriculturists of North Canara district has been implemented ?

Sri B. VAIKUNTA BALIGA.—Yes.

Sri RAMAKRISHNA HEGDE.—May I know whether the G. O. pertaining to regularisation of encroached lands on betta land has been implemented ?

Sri B. VAIKUNTA BALIGA.—Yes Sir.

Sri RAMAKRISHNA HEGDE.—May I know whether the Minister's replies are based on the replies he has received or has he and personal knowledge of it ?

Sri B VAIKUNTA BALIGA.—Sir, from the information before me, I am replying.

Sri G. VENKATAI GOWDA.— May I know the percentage of area covered in North Canara ?

Sri B. VAIKUNTA BALIGA.—It is said to be 80 per cent.